**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ ಃ 176/2023**

**ಚಾಸಾ ಃ 5**
**ಪ್ರಾಸಾ ಃ 4**

| | |
|---|---|
| **ಹೆಸರು** | ಃ ಎಂ ಎಂ ಸತ್ಯನಾರಾಯಣ್ |
| **ತಂದೆಯ ಹೆಸರು** | ಃ ಎ ಬಿ ಮೇದಪ್ಪ |
| **ವಯಸ್ಸು** | ಃ 54 ವರ್ಷ |
| **ಉದ್ಯೋಗ** | ಃ ಪರಿವೀಕ್ಷಕ, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು |
| **ವಾಸಸ್ಥಳ** | ಃ ಮಡಿಕೇರಿ. ಪ್ರಸಕ್ತ ವಾಸ ಕೋರಮಂಗಲ, ಬೆಂಗಳೂರು |

**ದಿನಾಂಕ ಃ 10-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ಚಾಸಾ-1, 7 ಹಾಗೂ 8 ನನ್ನ ಸಹೋದರಿಯರು. ಚಾಸಾ6 ನನ್ನ ತಾಯಿ. ನಾನು ಬೆಂಗಳೂರಿನ ವಾಣಿಜ್ಯ ತೆರಿಗೆ ಕಛೇರಿಯಲ್ಲಿ ಪರಿವೀಕ್ಷಕನಾಗಿ ಕರ್ತವ್ಯ ನಿರ್ವಹಿಸಿಕೊಂಡಿರುತ್ತೇನೆ. ದಿನಾಂಕ 26-12-2012 ರಂದು ನನ್ನ 3ನೇ ತಂಗಿಯಾದ ಚಾಸಾ1 ರವರನ್ನು ಆರೋಪಿಯ ಜೊತೆ ಮಡಿಕೇರಿಯ ರಾಜ್ ದರ್ಶನ್ ಹಾಲ್ ನಲ್ಲಿ ಮದುವೆ ಮಾಡಿಕೊಟ್ಟಿರುತ್ತೇವೆ. ನನ್ನ ತಂಗಿಯಾದ ಚಾಸಾ-1 ರವರು ವಿರಾಜಪೇಟೆಯ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಡಾಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡಿಕೊಂಡಿದ್ದರಿಂದ ಆಕೆ ಹಾಗೂ ಆಕೆಯ ಗಂಡನಾದ ಆರೋಪಿ ವಿರಾಜಪೇಟೆಯ ಪಂಜರಪೇಟೆಯಲ್ಲಿರುವ ನಾರಾಯಣ್ ರಾವ್ ಎನ್ನುವವರ ಮನೆಯನ್ನು ಬಾಡಿಗೆಗೆ ಪಡೆದಕೊಂಡು ವಾಸ ಮಾಡಿಕೊಂಡಿದ್ದರು. ಮದುವೆಯಾದ ನಂತರ ಅವರಿಬ್ಬರು ಸುಮಾರು ಮೂರು ತಿಂಗಳವರೆಗೆ ಅನ್ಯೂನ್ಯವಾಗಿದ್ದು, ನಂತರ ಒಂದು ದಿನ ನನ್ನ ತಂಗಿಯಾದ ಚಾಸಾ1 ರವರು ನನಗೆ ಕರೆ ಮಾಡಿ ಆರೋಪಿಯು ನನಗೆ ಕಿರುಕುಳ ನೀಡಿ, ಮಾನಸಿಕ ಹಾಗೂ ದೈಹಿಕ ಹಿಂಸೆ ಮಾಡುತ್ತಿರುವುದಾಗಿ ತಿಳಿಸಿದ್ದು, ನಾನು ನನ್ನ ತಾಯಿಯಾದ ಚಾಸಾ6 ರವರೊಂದಿಗೆ ವಿರಾಜಪೇಟೆಗೆ ಬಂದು, ನನ್ನ ತಂಗಿಯಾದ ಚಾಸಾ1 ಹಾಗೂ ಆರೋಪಿಯೊಂದಿಗೆ ಮಾತನಾಡಿ ಹೊಂದಿಕೊಂಡು ಹೋಗುವಂತೆ ತಿಳಿಸಿರುತ್ತೇವೆ.

ನಂತರ ದಿನಾಂಕ 08-10-2022 ರಂದು ನನ್ನ ತಂಗಿಯಾದ ಚಾಸಾ1 ರವರು ನನಗೆ ಕರೆ ಮಾಡಿ, ತನ್ನ ಗಂಡನಾದ ಆರೋಪಿಯು ಪವಿತ್ರ ಅಲಿಯಾಸ್ ರಶ್ಮಿ

ಎಂಬುವರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುವುದಾಗಿ ಹಾಗೂ ಆ ಬಗ್ಗೆ ನಾನು ತನ್ನ ಗಂಡನಾದ ಆರೋಪಿಯನ್ನು ದಿನಾಂಕ **07-10-2022** ರಂದು ವಿಚಾರಿಸಿದಾಗ ಆತನು ತನಗೆ ಸೂಳೇ ಮುಂಡೆ ಎಂಬ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ, ಮನೆಯಿಂದ ಹೊರಟು ಹೋಗಿರುವುದಾಗಿ ತಿಳಿಸಿರುತ್ತಾಳೆ. ನಂತರ ನಾನು ಚಾಸಾ1 ರವರನ್ನು ನಾನು ಅವಳ ಗಂಡನಾದ ಆರೋಪಿಯೊಂದಿಗೆ ಮಾತನಾಡುವುದಾಗಿ ತಿಳಿಸಿರುತ್ತೇನೆ. ನಂತರ ನಾನು ಆರೋಪಿಯನ್ನು ಫೋನ್ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದ್ದು, ಆದರೆ ಆತ ಫೋನ್ ಸಂಪರ್ಕಕ್ಕೆ ಸಿಕ್ಕಿರುವುದಿಲ್ಲ ಹಾಗೂ ನನ್ನ ನಂಬರ್ ನ್ನು ಬ್ಲಾಕ್ ಮಾಡಿರುತ್ತಾರೆ.

ನಂತರ ದಿನಾಂಕ **02-12-2022** ರಂದು ನನ್ನ ತಂಗಿಯಾದ ಚಾಸಾ1 ರವರು ಆರೋಪಿ ವಿರುದ್ಧ ಪೋಲಿಸರಿಗೆ ಪುಕಾರನ್ನು ನೀಡಿರುತ್ತಾರೆ. ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ವಿಚಾರಿಸಿ ಹೇಳಿಕೆ ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟಿ ಸವಾಲು ಃ ಶ್ರೀಮತಿ. ವಿ ಸಿ ಪಿ ಆರೋಪಿ ಪರ ವಕೀಲರಿಂದ ಃ**

ನನ್ನ ಸಹೋದರಿಯಾದ ಚಾಸಾ1 ಹಾಗೂ ಆರೋಪಿಯದ್ದು ಅರೆಂಜ್ ಮ್ಯಾರೇಜ್ ಎಂದರೆ ಸರಿ. ಅವರ ಮದುವೆಯು ಸಿಂಗಲ್ ಮುಹೋರ್ತದಲ್ಲಿ ಬೇರೆ ಬೇರೆ ನಡೆದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಡಿಕೇರಿಯ ರಾಜ್ ದರ್ಶನ್ ಹಾಲ್ ನಲ್ಲಿ ಒಟ್ಟಿಗೆ ನಡೆದಿರುತ್ತದೆಂದು ನುಡಿಯುತ್ತಾರೆ. ಮದುವೆಯ ಸಮಯದಲ್ಲಿ ಆರೋಪಿಯು ಬಟ್ಟೆ ಅಂಗಡಿ ಇಟ್ಟುಕೊಂಡು ಸ್ವಂತ ವಾಹನವನ್ನು ಬಾಡಿಗೆಗೆ ಇಟ್ಟುಕೊಂಡು ತೋಟವನ್ನು ಸಹ ಹೊಂದಿರುತ್ತಾರೆ. ಮದುವೆಯಾದ ಸ್ವಲ್ಪ ದಿನದ ನಂತರ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಮಾತುಕತೆ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಚಾಸಾ1 ರವರ ಜೊತೆ ನಮ್ಮ ಮನೆಗೆ ಬರುವುದು ಹೋಗುವುದು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮದುವೆಯಾಗಿ ಮೂರು ತಿಂಗಳವರೆಗೆ ಆರೋಪಿ ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿದ್ದರು, ನಂತರ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂಗಿಯಾದ ಚಾಸಾ1 ರವರು ಆಕೆಯ ಸಂಸಾರದ ಯಾವುದೇ ವಿಚಾರವನ್ನು ನನ್ನೊಂದಿಗೆ ಹಂಚಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ.

ಪಂಜರಪೇಟೆಯಲ್ಲಿರುವ ನಾರಾಯಣ್ ರಾವ್ ರವರ ಮನೆಯನ್ನು ಆರೋಪಿಯೇ ಬಾಡಿಗೆಗೆ ಪಡೆದಿದ್ದರು ಎಂದರೆ ಸರಿ. ಸದರಿ ಮನೆಯ ಬಾಡಿಗೆ ಹಾಗೂ ಮುಂಗಡ ಹಣವನ್ನು ಆರೋಪಿಯೇ ಕಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂಗಿಯಾದ ಚಾಸಾ1 ರವರು ಕಟ್ಟಿದ್ದರು ಎಂದು ನುಡಿಯುತ್ತಾರೆ. ಮದುವೆಯ ನಂತರ ನನ್ನ ತಂಗಿಯಾದ ಚಾಸಾ1 ಹಾಗೂ ಆರೋಪಿ ಮಾತ್ರ ಜೊತೆಯಲ್ಲಿದ್ದಿದ್ದರು ಎಂದರೆ ಸರಿ. ಆರೋಪಿಯ ಬಟ್ಟೆ ಅಂಗಡಿ ಗೋಣಿಕೊಪ್ಪದಲ್ಲಿದ್ದಿರುತ್ತದೆ. ಅವರ ಬಟ್ಟೆ ಅಂಗಡಿಗೆ ಎಲ್ಲ ರೀತಿ ಗ್ರಾಹಕರು ಬರುತ್ತಿದ್ದರು ಎಂದರೆ ಸರಿ. ಆರೋಪಿಯ ಅಂಗಡಿಗೆ ಖಾಯಂ ಗ್ರಾಹಕರು ಸಹ ಬರುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಖಾಯಂ ಗ್ರಾಹಕರು ಆರೋಪಿಯ ಮೊಬೈಲ್ ಗೆ ಕರೆ ಮಾಡಿ ಬಟ್ಟೆಗಳನ್ನು ಖರೀಸಿದ್ದರು ಹಾಗೂ ಆ ಸಂಬಂಧ ಅವರುಗಳು ಆನ್ ಲೈನ್ ಮೂಲಕ ಹಣ ಪಾವತಿ ಮಾಡುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನನ್ನ ತಂಗಿಯಾದ ಚಾಸಾ1 ರವರು ವಿರಾಜಪೇಟೆಯ ವಾಣಿಜ್ಯ ತೆರಿಗೆ ಇಲಾಖಾ ಕಛೇರಿಯಲ್ಲಿ ದಿನಗೂಲಿ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದಾರೆ. ದಿನಾಂಕ **07-10-2022** ರಂದು ನನ್ನ ತಂಗಿಯಾದ ಚಾಸಾ1 ರವರು ನನಗೆ ಕರೆ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ದಿನಾಂಕ **08-10-2022** ರಂದು ಆಕೆ ಕರೆ ಮಾಡಿರುತ್ತಾಳೆ ಎಂದು ನುಡಿಯುತ್ತಾರೆ. ಆರೋಪಿ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಆರ್ಥಿಕವಾಗಿ ತುಂಬಾ ಸಬಲರಾಗಿರುತ್ತಾರೆಂದು ನುಡಿಯುತ್ತಾರೆ. ಆರೋಪಿಯ ತಿಂಗಳ ಆದಾಯಕ್ಕಿಂತ ನನ್ನ ತಂಗಿಯಾದ ಚಾಸಾ1 ರವರ ತಿಂಗಳ ಆದಾಯ ಹೆಚ್ಚಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ **07-10-2022** ರಂದು ನನ್ನ ತಂಗಿಯಾದ ಚಾಸಾ1 ರವರು ಊಟದ ವಿಚಾರದಲ್ಲಿ ಆರೋಪಿಯೆಂದಿಗೆ ಜಗಳ ಮಾಡಿ, ಅವರನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ರಾತ್ರಿ ಆರೋಪಿಯು ಮನೆಯಿಂದ ಹೊರಗಡೆ ಕಾಲ ಕಳೆದು ಮರುದಿನ ಅಂದರೆ ದಿನಾಂಕ **08-10-2022** ರಂದು ಆರೋಪಿ ಹಾಗೂ ಅವರ ಮನೆಯವರು ನನ್ನ ತಂಗಿಯಾದ ಚಾಸಾ1 ರವರನ್ನು ಆರೋಪಿಯ ತಂದೆಯ ಮನೆಗೆ ಬರುವಂತೆ ಕರೆದಿದ್ದು, ಆದರೆ ಚಾಸಾ-1 ರವರು ಅವರ ಜೊತೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಪವಿತ್ರ ಅಲಿಯಾಸ್ ರಶ್ಮಿ ಎನ್ನುವವರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಬಗ್ಗೆ ಪೂರಕವಾಗಿ ಚಾಸಾ-1

ರವರು ದಾಖಲೆಯನ್ನು ತೋರಿಸಿರುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿಯು ಸದರಿ ಪವಿತ್ರ ಅಲಿಯಾಸ್ ರಶ್ಮಿ ಎಂಬುವವರಿಗೆ ಫೋನ್ ಪೇ / ಗೂಗಲ್ ಪೇ ಮೂಲಕ ಹಣ ಕಳುಹಿಸಿರುತ್ತಾರೆಂದು ನುಡಿಯುತ್ತಾರೆ. ಸದರಿ ಪವಿತ್ರ ಎನ್ನುವವರು ಆರೋಪಿಯ ಬಟ್ಟೆ ಅಂಗಡಿಯ ಖಾಯಂ ಗ್ರಾಹಕರಾಗಿದ್ದು, ಆ ರೀತಿ ಆಕೆ ಆರೋಪಿಯಿಂದ ಬಟ್ಟೆ ಖರೀದಿಸಿದ ಸಂಬಂಧ ಆರೋಪಿಗೆ ಹಣವನ್ನು ನೀಡಿದ್ದು, ಸದರಿ ಬಟ್ಟೆಯ ಹಣವನ್ನು ಪಡೆದು ಉಳಿದ ಹಣವನ್ನು ಆರೋಪಿಯು ಆಕೆಗೆ ಫೋನ್ ಪೇ ಮೂಲಕ ಹಿಂದಕ್ಕೆ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ.

ನಾನು ದಿನಾಂಕ 08-10-2022 ರ ನಂತರ ಆರೋಪಿಗೆ ಯಾವುದೇ ಕರೆ ಮಾಡಿ, ಅವರನ್ನು ಸಂಪರ್ಕಿಸಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಚಾಸಾ-1 ರವರಿಗೆ ಹಲ್ಲೆ ಮಾಡಿದ ಸಂಬಂಧ ಚಾಸಾ-1 ರವರು ಯಾವುದೇ ಆಸ್ಪತ್ರೆಗೆ ಹೋಗಿರುವುದಿಲ್ಲ. ನನ್ನ ತಂಗಿಯಾದ ಚಾಸಾ1 ರವರು ಸಣ್ಣಪುಟ್ಟ ವಿಚಾರಗಳಿಗೆ ಆರೋಪಿಯೊಂದಿಗೆ ಜಗಳ ತೆಗೆಯುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಗೆ ಸರಿಯಾದ ಕೆಲಸವಿಲ್ಲ ಹಾಗೂ ಕೈ ತುಂಬಾ ಸಂಬಂಳವಿಲ್ಲ ಹಾಗೂ ಮನೆಯವರು ಮಧ್ಯಮ ವರ್ಗದವರು ಎಂದಲ್ಲ ಹೇಳಿ, ಚಾಸಾ-1 ರವರು ಆರೋಪಿಗೆ ಬೈದು ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂಗಿಯಾದ ಚಾಸಾ1 ರವರು ಆರೋಪಿಯ ತಾಯಿ ಹಾಗೂ ಅಕ್ಕ ಭಾವನಿಗೆ ಬಾಯಿಗೆ ಬಂದಂತೆ ಬೈದು ನಿಂದಿಸುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ನನ್ನ ತಂಗಿಯಾದ ಚಾಸಾ1 ರವರು ಆರೋಪಿಯ ತಾಯಿ ಹಾಗೂ ಅಕ್ಕ ಭಾವನೊಂದಿಗೆ ಗಲಾಟೆ ಮಾಡಿ, ಅವರಿಗೆ ನಿಂಧಿಸಿದ್ದರಿಂದ ಆರೋಪಿಯ ಅಕ್ಕನವರು ನನ್ನ ತಂಗಿಯಾದ ಚಾಸಾ1 ರವರ ವಿರುದ್ದ ಬೆಂಗಳೂರಿನ ಸಿ ಇ ಎನ್ ಪೊಲೀಸ್ ಠಾಣೆಯಲ್ಲಿ ಪುಕಾರು ನೀಡಿದ್ದರು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ.

ನನ್ನ ತಂಗಿಯಾದ ಚಾಸಾ1 ರವರು ಆರೋಪಿ ವಿಚ್ಛೇದನಾ ಕೊಡುವಂತೆ ದಿನಾಲೂ ಪೀಡಿಸುತ್ತಿದ್ದು, ಈಗಲೂ ಸಹ ಅದೇ ರೀತಿ ಪೀಡಿಸುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ತಂಗಿಗೆ ವಿಚ್ಛೇದನಾ ಕೊಡುವುದಿಲ್ಲವೆಂದು ತಿಳಿಸಿದ ಕಾರಣಕ್ಕಾಗಿ ನಾನು ಹಾಗೂ ಚಾಸಾ1 ರವರು ಸೇರಿಕೊಂಡು ಆರೋಪಿಯ ವಿರುದ್ದ ಸುಳ್ಳು ಪುಕಾರನ್ನು ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ

ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಯು ನನ್ನ ತಂಗಿಯಾದ ಚಾಸಾ1 ರವರಿಗೆ ಯಾವುದೇ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿ ಹಲ್ಲೆ ಮಾಡಿರುವುದಿಲ್ಲ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ತಂಗಿಯಾದ ಚಾಸಾ1 ಹಾಗೂ ಕುಟುಂಬದವರು ಆರೋಪಿಯಲ್ಲಿ ಚಾಸಾ1 ರವರಿಗೆ ವಿಚ್ಛೇದನಾ ಕೊಡುವಂತೆ ಪೀಡಿಸಿ, ಜೀವ ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ತಂಗಿಯಾದ ಚಾಸಾ1 ರವರು ನೀಡಿದ ಸುಳ್ಳು ಪುಕಾರಿಗೆ ಪೂರಕವಾಗಿ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.